ಈ. ಅತಿಕ್ರಮಣದಾರರು ಸಿವಿಲ್ ಜಡ್ಜ್ (ಹಿ.ವಿ) ನ್ಯಾಯಾಲಯ ಭಾಲ್ಕಿಯಲ್ಲಿ ದಾವೆ ಹೂಡಿದ್ದು, ಗೌರವಾನ್ವಿತ ನ್ಯಾಯಾಲಯವು ಯಥಾಸ್ಥಿತಿ ಕಾಪಾಡಲು ಆದೇಶ ನೀಡಿರುತ್ತದೆ. ನ್ಯಾಯಾಲಯದ ಅಂತಿಮ ತೀರ್ಮಾನದ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ರಾಜ್ಯದ ಗ್ರಾಮಗಳಲ್ಲಿ ಸ್ಮಶಾನಗಳಿಗೆ ಭೂಮಿ ಮಂಜೂರಾತಿ

920 (1138) - ಶ್ರೀ ಪೂಜಾರ್ ಪಿ.ಹೆಚ್. (ಬಾಗಲಕೋಟೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಇರುವ ಒಟ್ಟು ಹಳ್ಳಿಗಳು ಎಷ್ಟು, ಸ್ಮಶಾನ ಜಾಗ (ಸರ್ಕಾರಿ) ಇರಲಾರದ ಹಳ್ಳಿಗಳೆಷ್ಟು?

ಆ. ಬಾಗಲಕೋಟೆ ತಾಲ್ಲೂಕಿನ ನೇಮಿಕೇರಿ ಗ್ರಾಮಕ್ಕೆ ಸ್ಮಶಾನ ಇಲ್ಲದೇ ಇರುವ ಅಂಶ ಸರ್ಕಾರದ ಗಮನದಲ್ಲಿದೆಯೇ, ಹಾಗೆ ಸ್ಮಶಾನ ಇರಲಾರದ ಬಾಗಲಕೋಟೆ ತಾಲ್ಲೂಕಿನ ಹಳ್ಳಿಗಳು ಯಾವುವು?

ಇ. ಸ್ಮಶಾನ ಜಾಗ ಇರುವ ಕಾರಣಕ್ಕಾಗಿ, ಶವ ಸಂಸ್ಕಾರವನ್ನು ಆ ಗ್ರಾಮಗಳ ಜನತೆ ಊರಿನ ಪಟ್ಟಾ ಜಮೀನುಗಳಲ್ಲಿ ಮಾಡುತ್ತ ಬಂದಿದ್ದು ಇತ್ತೀಚೆಗೆ ಅಲ್ಲಲ್ಲಿ ವಿರೋಧ ವ್ಯಕ್ತವಾಗುತ್ತಿರುವ ಕಾರಣ ಜನತೆ ತೊಂದರೆ ಅನುಭವಿಸುತ್ತಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ. ಹಾಗಿದ್ದಲ್ಲಿ ಅಂಥ ಗ್ರಾಮಗಳಿಗೆ ಸ್ಮಶಾನ ಜಾಗ ಭೂಮಿಯನ್ನು ಒದಗಿಸಲಾಗುವುದೇ, ಹಾಗಿದ್ದಲ್ಲಿ, ಎಂದು, ಸರ್ಕಾರವು ಇದರ ಬಗ್ಗೆ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ. 29318 7224

ಆ. ನೇಮಿಕೇರಿ ಗ್ರಾಮಕ್ಕೆ ಸ್ಮಶಾನ ಇಲ್ಲದ ಅಂಶ ಸರ್ಕಾರದ ಗಮನಕ್ಕೆ ಬಂದಿದೆ. ಬಾಗಲಕೋಟೆ ತಾಲ್ಲೂಕಿನ ಗದ್ದನಕೇರಿ, ನೇಮಿಕೇರಿ ಮತ್ತು ಮನ್ನಿಕಟ್ಟಿ ಗ್ರಾಮಗಳಲ್ಲಿ ಸ್ಮಶಾನ ಇರುವುದಿಲ್ಲ.

ಇ. ಸಾರ್ವಜನಿಕರು ಪ್ರೀತಿ ವಿಶ್ವಾಸ ಹಾಗೂ ನಂಬಿಕೆಯಿಂದ ತಮ್ಮ ತಮ್ಮ ಹೊಲಗಳಲ್ಲಿಯೇ ತಮ್ಮ ಹಿರಿಯರ ಶವಸಂಸ್ಕಾರವನ್ನು ಮಾಡುತ್ತಾ ಬರುತ್ತಿದ್ದು, ಇದರಲ್ಲಿ ಅಂತಹ ಪ್ರತಿರೋಧ ವ್ಯಕ್ತವಾಗಿರುವುದಿಲ್ಲ.

ಈ. ಕನಿಷ್ಠ ಊರಿಗೊಂದು ಸ್ಮಶಾನಕ್ಕಾಗಿ ಜಮೀನನ್ನು ಒಗಿಸುವುದು ಸರ್ಕಾರದ ಉದ್ದೇಶವಾಗಿದೆ. ಆದುದರಿಂದ ಸರ್ಕಾರದ ಸುತ್ತೋಲೆ ಸಂಖ್ಯೆ ಆರ್ ಡಿ 185 ಎಕ್ಕೂಡಬ್ಲು ೃ 92 ಜುಲೈ 1997ರ ಅನ್ವಯ ರಾಜ್ಯದಲ್ಲಿ ಅಗತ್ಯವಿರುವ ಗ್ರಾಮಗಳಿಗೆ ರುದ್ರ ಭೂಮಿ ಸೌಲಭ್ಯ ಕಲ್ಪಿಸುವ ಕಾರ್ಯ ಯೋಜನೆಯನ್ನು ಸರ್ಕಾರವು ಅನುಷ್ಠಾನಗೊಳಿಸಿದ್ದು, ಈ ಯೋಜನೆಯಂತೆ ಸ್ಮಶಾನಕ್ಕಾಗಿ ಜಾಗ ಇಲ್ಲದ ಗ್ರಾಮಗಳಿಗೆ ಜಮೀನನ್ನು ಒದಗಿಸಲು ಸರ್ಕಾರಿ ಜಮೀನು ಲಭ್ಯವಿಲ್ಲದ ಗ್ರಾಮಗಳಿಗೆ ಖಾಸಗಿ ಜಮೀನನ್ನು ಖರೀದಿಸಲು ಅವಕಾಶ ಕಲ್ಪಿಸಲಾಗಿದೆ. ರಾಜ್ಯದಲ್ಲಿ ಸ್ಮಶಾನ ಜಾಗ ಇರಲಾಗದ ಹಳ್ಳಿಗಳಿಗೆ ತ್ವರಿತವಾಗಿ ಜಮೀನನ್ನು ಒದಗಿಸುವ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದ್ದು ಕಾರ್ಯ ಯೋಜನೆ ಚಾಲನೆಯಲ್ಲಿ ಇರುತ್ತದೆ.